Free Timber for House Building to residents of Heggadadevankote Taluk.

Q.—518. Sri SHIVANANJE GOWDA (Mysore Taluk).—

Will the Government be pleased to state :—

(*a*) whether a representation was received from residents of Heggadadevankote Taluk for permission to fetch timber from forest free of cost for house building purposes ;

(*b*) the reason for their not making suitable arrangements in this matter in spite of such representation ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) As there was not enough timber available in the district jungles their request could not be complied with.

ಶ್ರೀ ಶಿವನಂಜೇಗೌ.—ಮನೆ ಕಟ್ಟುಕೊಳ್ಳುವುದಕ್ಕೆ ಜಂಗಲು ಪ್ರದೇಶದಿಂದ ಚೌಬೀನೆ ಮರವನ್ನು ಮುಫತ್ತಾಗಿ ಕೊಡಬೇಕೆಂಬ ನಿಯಮವಿತ್ತೆಂದು ಕೇಳಿದ್ದೇನೆ, ಈಗ ಏಕೆ ಕೊಡುತ್ತಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಚೌಬೀನೆ ಮರವನ್ನು ಮನೆಕಟ್ಟಿಕೊಳ್ಳಲು ಮುಫತ್ತಾಗಿ ಯಾವಾಗಲೂ ಕೊಡುತ್ತಿಲ್ಲ.

ಶ್ರೀ ಶಿವನಂಜೇಗೌಡ.—ಷೆಡ್ಯೂಲ್ ರೇಟ್ ನಾಲ್ಕಾಣೆಯಂತೆ ಕೊಡುತ್ತಿದ್ದರು, ಜಂಗಲ್ ವುಡ್ ಮುಫತ್ತಾಗಿ ಕೊಡುತ್ತಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು ರಿಯಾಯಿತಿಗಳ ಪ್ರಕಾರ ಜಂಗಲ್ ವುಡ್ ಕೊಡುತ್ತಿದ್ದರು. ಆದರೆ ಹೆಗ್ಗಡದೇವನಕೋಟೆ ಫಾರೆಸ್ಟ್‌ನಲ್ಲಿ ಸಾಕಷ್ಟು ಮರಗಳಿಲ್ಲದೇಯಿರುವುದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಶಿವನಂಜೇಗೌಡ.—ರಿಯಾಯಿತಿಗಳ ಪ್ರಕಾರ ಮಲೆನಾಡಿನ ಜನರಿಗೆ ಅನುಕೂಲವಾಗುವಂತೆ ಸಾಧ್ಯವಾದಮಟ್ಟಿಗೂ ಮರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಯಾರಾದರೂ ಮನೆಕಟ್ಟುವುದಕ್ಕೆ ಜಂಗಲ್ ವುಡ್ ಬೇಕೆಂದು ಕೇಳಿದರೆ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರೂ ಬೇಕಾದರೂ ಡಿಪೋಗಳಲ್ಲಿ ಕೊಂಡುಕೊಳ್ಳಬಹುದು.

ಶ್ರೀ ಕೆ. ಲಕ್ಕಪ್ಪ.—ಮುಫತ್ತಾಗಿ ಕೊಡುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಚೌಬೀನೆ ಮರವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ.

Resurvey in Mysore Taluk.

Q.—520. Sri SHIVANANJE GOWDA (Mysore Taluk).

Will the Government be pleased to state :—

(*a*) whether the representations that were made before the Representative Assembly and also before this House during the last 8 to 10 years, requesting to conduct a resurvey in Mysore Taluk, has not been under consideration of Government ;

(*b*) whether it has not come to their notice that full 30 years have lapsed since Mysore Taluk was surveyed;

(*c*) whether they would direct that resurvey in Mysore Taluk and in the area forming the atchkat under the Krishnarajasagar Right Bank low level canal would be conducted this year and thus classify the lands coming under wet cultivation ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Though thirty years have elapsed since the resurvey operations in Mysore Taluk were completed the actual settlement took place during 1924-25. The next revision falls due only in 54-55 as the year of first revision settlement is the basis of survey guarantee.

(*c*) The survey guarantee period in respect of Mysore Taluk expires in 1954-55. Priority will have to be given to those Taluks in respect of which the second revision settlement is long overdue.

ಶ್ರೀ ಶಿವನಂಜೇಗೌಡ.—ಸರ್ವೆ ಆಗಿ ಮೂವತ್ತು ವರ್ಷಗಳಾಗಿವೆ, ರೀಸರ್ವೆ ಮಾಡಬೇಕೆಂದು ಮನವಿಗಳು ಬಂದಿದ್ದರೂ 1954-55ರಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ಇನ್ನೂ ಮುಂಚೆ ಏಕೆ ಸರ್ವೆ ಮಾಡುವುದಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಹೇಳಿದೆ. 1924-25ರಲ್ಲಿ ಸೆಟ್ಲ್‌ಮೆಂಟ್ ಆಯಿತು.

ಶ್ರೀ ಶಿವನಂಜೇಗೌಡ.—ಹಾಗಿದ್ದರೆ ಎಷ್ಟು ವರ್ಷಗಳಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಮೂವತ್ತು ವರ್ಷಗಳಾಗುತ್ತಾ ಬಂತು. ಆದರೆ ಸರ್ವೆ ಗ್ಯಾರಂಟಿ ಅವಧಿ ಇನ್ನೂ ಮುಗಿದಿಲ್ಲ.